ಗೋವಿಂದರಾಯ, 'ಅದು ಇದು ಸುಳ್ಳು ಬೊಗಳಬೇಡ, ಯಾಕೆ ಬಂದದ್ದು ಅಂತಾ ನಿನಗೇ ಗೊತ್ತು, ಉಳಿದವ್ರಿಗೂ ಗೊತ್ತಾಗ್ಲಿ ಹೇಳು' ಎನ್ನುತ್ತ ಪಕ್ಕದವನು... ಹೀಗೇ ಒಬ್ಬರಿಗೊಬ್ಬರು ಮಾತು ಬೆಸೆದು ದನಿ ಕೂಡಾ ಜೋರಾಗತೊಡಗಿತು.

ಗಲಾಟೆ ಕೇಳಿ, ಹಿಂದಿನ ಮನೆಯ ಮಾಲೀಕ ಹಾಗೂ ಆತನ ಹೆಂಡತಿ ಅವರ ಮನೆಯ ಟೆರೇಸಿಗೆ ಬಂದರು. ರಸ್ತೆಯ ಇನ್ನೊಂದು ಬದಿಯ ಪೂರ್ಣ ಕತ್ತಲೆಯಲ್ಲಿದ್ದ ಅಪಾರ್ಟ್‌ಮೆಂಟಿನ ಕೆಲವು ಮನೆಯ ದೀಪಗಳು ಹೊತ್ತಿಕೊಂಡು, ಕಿಟಕಿ ಪರದೆಯ ಹಿಂದೆ ಮುಖಗಳು ಕಾಣಿಸತೊಡಗಿದವು. ಒಂದಿಬ್ಬರು ಬಾಲ್ಕನಿಯಲ್ಲಿ ಬಂದು ನಿಂತು ನೋಡತೊಡಗಿದರು.

ಪಕ್ಕದ ಮನೆಯವ ಈಗ ಜೋರಾಗೇ ಮಾತಾಡತೊಡಗಿದ. 'ನಿಮ್ಮ ಮಗನಿಗೆ ಏನೋ ರೋಗ ಇದೆ, ಡಾಕ್ಟರಿಗೆ ತೋರಿಸಿ...'

'ಬಾಯಿಗೆ ಬಂದಹಾಗೆ ಮಾತಾಡ್ಬೇಡ್ರೀ, ಮೊದಲು ಏನಾಯ್ತು ಅಂತಾ ಹೇಳ್ರೀ...' ಎನ್ನುತ್ತಾ ಗೋವಿಂದರಾಯನೂ ಟೆರೇಸ್ ಹಾರಿ ಇತ್ತ ಬಂದ.

'ಕೇಳ್ರೀ, ಇವನನ್ನೇ... ಸಿಮ್ಮು ಹುಡುಕಲು ಬಂದೆ, ಅಂದ್ನಲ್ಲಾ... ಕೇಳಿ, ಕೈಲಿ ಏನು ಹಿಡ್ಕೊಂಡಿದ್ದಾ ಅಂತಾ...' ಎನ್ನುತ್ತಾ ಹುಡುಗನತ್ತ ತಿರುಗಿ, 'ಬೋಳೀ ಮಗನೆ, ರಾತ್ರಿ ಕದ್ದು ಬಂದು ಒಣಗಲು ಹಾಕಿದ ಬೇರೆಯವರ ಮನೆ ಹೆಂಗಸರ ಬ್ರಾ ಕಾಚಾ ಮೂಸ್ತೀಯಾ... ಲೋಫರ್...' ಎಂದು ತಲೆಯಮೇಲೆ ರಪ್ಪನೆ ಹೊಡೆದ. 'ನೋಡ್ತಾನೇ ಇದೀವಿ. ಬೆಳಿಗ್ಗೆ ನೋಡಿದ್ರೆ ಯಾವ್ಯಾವ್ದೋ ಅವಸ್ಥೇಲಿ ಎಲ್ಲೆಲ್ಲೋ ಬಿದ್ದಿರ್ತಿತ್ತು, ಒಮ್ಮೊಮ್ಮೆ ಕಾಣೆಯೇ ಆಗಿರ್ತಿತ್ತು. ಎರಡು ತಿಂಗಳಿಂದಾ ಈ ಹಲ್ಕಾ ಕೆಲಸ ಯಾರು ಮಾಡ್ತಿದಾರೆ ಅಂತಾ ತಲೆ ಕೆಡಿಸಿಕೊಂಡು ನೋಡ್ತಾ ಇದ್ದೆ, ಇವತ್ತು ರೆಡ್‌ಹ್ಯಾಂಡ್ ಆಗಿ ಹಿಡದಿದೀನಿ...'

'ರೀ, ಹಂಗೆಲ್ಲಾ ಮಾಡೊಲ್ಲಾರೀ ನಮ್ಮಗ. ಏನೇನೋ ಹೇಳ್ಬೇಡ್ರೀ...' ನಿಂತಲ್ಲಿಂದೇ ಹೇಳಿದಳು ಗೋವಿಂದರಾಯನ ಹೆಂಡತಿ. 'ಬೆಳಿಗ್ಗೆ ಹೋದ್ರೆ, ರಾತ್ರೆ ಬರ್ತಾನೆ ಮನೆಗೆ, ಟ್ಯೂಷನ್ನು ಕಾಲೇಜು ಬಿಟ್ಟು ಹೊರಗಡೆ ಹೋದೋನಲ್ಲ. ಪಾಪ... ಇವತ್ತು ಯಾಕೋ ಫೋನ್ ಮಾಡ್ಬೇಕು ಅಂತಾ ಮೇಲೆ ಬಂದ...'

'ಅದೆಲ್ಲಾ ಮಾಡಿಲ್ಲಾ... ಅವನ್ನ ಬಿಡಿ ಫಸ್ಟು...' ಎನ್ನುತ್ತಾ ಮಗನನ್ನು ಬಿಡಿಸಲು ಗೋವಿಂದರಾಯ ಹತ್ತಿರ ಬರುತ್ತಿರುವಂತೆಯೇ ಆತನ ದಿಕ್ಕಿಗೇ ಹುಡುಗನನ್ನು ನೂಕಿ 'ಕಾಚಾ ಕೈಲಿ ಹಿಡಿದು ನೆಕ್ತಾ ಇರೋವಾಗ್ಲೇ ಹಿಡದೀದೀನಿ. ನನ್ನ ಕಂಡಕೂಡ್ಲೇ ಅಲ್ಲೇ ಬಿಸಾಕಿ ಓಡೋಗ್ತಾ ಇದ್ದ, ಸಿಕ್ಕಿ ಬಿದ್ದ. ಇದೇ ಕೊನೆ. ಮತ್ತೇನಾದ್ರೂ ಇತ್ತ ಬಂದ್ರೆ, ಮೊದಲು ನಾನೇ ಕೈ ಕಾಲು ಮುರಿದು ಆಮೇಲೆ ಪೊಲೀಸರಿಗೆ ಕೊಡ್ತೀನಿ..' ಎಂದು ಘರ್ಜಿಸಿದ ಪಕ್ಕದವ.

ಇಲ್ಲಿಯವರೆಗೂ ಸುಮ್ಮನೇ ನೋಡುತ್ತಾ ನಿಂತಿದ್ದ ಹಿಂದಿನ ಮನೆಯವನ ಹೆಂಡತಿ, 'ಈಗ್ಲೇ ಮಾಡಿ ಪೊಲೀಸರಿಗೆ ಫೋನು, ಇಂಥವರು ಅಕ್ಕ ಪಕ್ಕ ಇದ್ರೆ ಭಾರೀ ಡೇಂಜರು...' ಎನ್ನುತ್ತಾ ದನಿಗೂಡಿಸಿದಳು. ಆಕೆಯ ಗಂಡನೂ 'ಹೌದು, ಹೌದು' ಅಂದ.

ಬಿಡಿಸಿಕೊಂಡು ವಾಪಸ್ ತನ್ನ ಮನೆಯ ಟೆರೇಸಿಗೆ ಬಂದ ಮಗನನ್ನು 'ಥೂ... ಥೂ...' ಅನ್ನುತ್ತ ಗೋವಿಂದರಾಯನ ಹೆಂಡತಿ ಬೆನ್ನಿನಮೇಲೆ ರಪರಪನೆ ಹೊಡೆಯತೊಡಗಿದಳು.

'ರೀ...' ಸಮಾಧಾನದಿಂದ ಪಕ್ಕದವನನ್ನು ಕರೆಯೋಣ ಎಂದುಕೊಂಡ ಗೋವಿಂದರಾಯನಿಗೆ, ಆತನ ಹೆಸರು ತನಗೆ ಗೊತ್ತಿಲ್ಲದಿರುವುದು ಅರಿವಿಗೆ ಬಂದು ತುಸು ತಡವರಿಸಿ, '...ರೀ... ಇವರೆ... ಇನ್ನೊಂದ್ಸಲಾ ಏನಾದ್ರೂ ರಿಪೀಟಾದ್ರೆ , ನೀವ್ಯಾಕೆ, ನಾನೇ ಫಸ್ಟು ಅವನನ್ನು ಪೊಲೀಸರಿಗೆ